ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಗೋವಿಂದ ರಾಜು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1044

ಉತ್ತರಿಸಬೇಕಾದ ದಿನಾಂಕ : 21.09.2021

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಕೋಲಾರ-ಚಿಕ್ಕಬಳ್ಳಾಪುರ VSSN ಹಾಗೂ SFS ಸೊಸೈಟಿಗಳ ಮುಖಾಂತರ ನೀಡಲಾದ 0% ಬಡ್ಡಿ ಸಾಲಕ್ಕೆ ಸರ್ಕಾರ ನಿಗಧಿ ಪಡಿಸಿರುವುದಕ್ಕಿಂತ ಹೆಚ್ಚಿಗೆ ಬಡ್ಡಿ ಕ್ಲೇಮ್ ಮಾಡಿ, ಆಡಳಿತ ಮಂಡಳಿಯವರು ಅಧಿಕಾರ ದುರುಪಯೋಗಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಆ)	ಬಂದಿದ್ದಲ್ಲಿ, ಎಷ್ಟು ಸೊಸೈಟಿಗಳಲ್ಲಿ ಈ ರೀತಿ ಅಕ್ರಮ ನಡೆದಿದೆ;	ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಸ್ವ-ಸಹಾಯ ಗುಂಪುಗಳಿಗೆ ವಿತರಿಸಿದ ಸಾಲಗಳಿಗೆ ಸರ್ಕಾರದ ನಿಗಧಿಪಡಿಸಿರುವುದಕ್ಕಿಂತ ಹೆಚ್ಚಿನ ಬಡ್ಡಿ ಕ್ಲೈಂ ಮಾಡಿರುವ ಬಗ್ಗೆ ನಿಬಂಧಕರ ಕಛೇರಿಗೆ ದೂರು ಸ್ವೀಕೃತವಾಗಿದ್ದು, ಈ ಬಗ್ಗೆ ತನಿಖೆ ನಡೆಸಲು ಸಹಕಾರ ಸಂಘಗಳ ಉಪ ನಿಬಂಧಕರು 3ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರಿಗೆ ದಿ:26.07.2021 ರಲ್ಲಿ ಆದೇಶಿಸಿದ್ದು, ಉಪ ನಿಬಂಧಕರಿಂದ ವರದಿ ನಿರೀಕ್ಷಿಸಲಾಗಿದೆ. ಎಷ್ಟು ಸಹಕಾರ ಸಂಘಗಳಲ್ಲಿ ಅಕ್ರಮ ನಡೆದಿದೆ ಎಂಬುದು ಪೂರ್ಣ ವರದಿ ಬಂದ ನಂತರ ತಿಳಿದು ಬರುತ್ತದೆ.
(ಇ)	ಹಾಗಿದ್ದಲ್ಲಿ, ಇಂತಹ ಸೊಸೈಟಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರಗಳನ್ನು ನೀಡುವುದು)	ಇನ್ನೂ ವರದಿ ಬಾರದೆ ಇರುವುದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ: ಸಿಒ 276 ಸಿಎಲ್ಎಸ್ 2021

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು